




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಹೊಸ ಶಾಖಾಕೇಂದ್ರಗಳು: ಯಾದಾದ್ರಿ ಭುವನಗಿರಿ:** ಹೈದರಾಬಾದ್ ಕೇಂದ್ರದ ಉಪಕೇಂದ್ರವಾಗಿದ್ದ ಈ ಕೇಂದ್ರವು ಈಗ ಸ್ವತಂತ್ರ ಕೇಂದ್ರವಾಗಿ ಪರಿವರ್ತಿತವಾಗಿದೆ.

**ಶಾಖಾಕೇಂದ್ರಗಳ ಚಟುವಟಿಕೆಗಳು : ಕೃಷ್ಣನಗರ** ರಾಮಕೃಷ್ಣ ಆಶ್ರಮವನ್ನು ರಾಮಕೃಷ್ಣ ಮಿಷನ್ನಿನ ಕೇಂದ್ರವಾಗಿ ಸ್ವೀಕರಿಸಲಾಗಿದೆ. ಕೇಂದ್ರದ ಉದ್ಘಾಟನ ಕಾರ್ಯಕ್ರಮದ ಅಂಗವಾಗಿ ವಿಶೇಷ ಪೂಜೆ, ಮೆರವಣಿಗೆ, ಸಾರ್ವಜನಿಕ ಕಾರ್ಯಕ್ರಮಗಳನ್ನು ಒಳಗೊಂಡ ಒಂದು ದಿನದ ಕಾರ್ಯಕ್ರಮವನ್ನು ಜುಲೈ ೧ರಂದು ನಡೆಸಲಾಯಿತು.

**ಕಾನ್ಪುರ** ಆಶ್ರಮದಲ್ಲಿ ಜುಲೈ ೮ರಂದು ‘ಗದಾಧರ ಮಂಡಪ’ವನ್ನು ಪೂಜ್ಯ ಸ್ವಾಮಿ ಗೌತಮಾನಂದರು ಉದ್ಘಾಟಿಸಿದರು.

**ನವದ್ವೀಪ** ಆಶ್ರಮದಲ್ಲಿ ಜುಲೈ ೧೦ರಂದು ಸ್ವಾಮಿ ವಿವೇಕಾನಂದರ ಮೂರ್ತಿಯನ್ನು ರಸ್ತೆಗಳು ಸೇರುವ ವೃತ್ತದಲ್ಲಿ ಅನಾವರಣಗೊಳಿಸಲಾಯಿತು.

**ರಾಂಚಿ ಸ್ಯಾನಿಟೋರಿಯಮ್**‌ನಲ್ಲಿ ಹೊಸ ಹೊರರೋಗಿ (OPD) ವಿಭಾಗವನ್ನು ಜುಲೈ೧೩ರಂದು ತೆರೆಯಲಾಯಿತು.

ಉತ್ತರಖಂಡ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಪುಷ್ಕರ ಸಿಂಗ್ ಧಾಮಿಯವರು **ಮಾಯಾವತಿ** ಆಶ್ರಮಕ್ಕೆ ಜುಲೈ ೧೪ರಂದು ಭೇಟಿಕೊಟ್ಟರು.

**ಡೆಹ್ರಡೂನ್** ಕೇಂದ್ರದ ವಿವೇಕಾನಂದ ನೇತ್ರಾಲಯಕ್ಕೆ NABH (ರಾಷ್ಟ್ರೀಯ ಆಸ್ಪತ್ರೆ-ಆರೋಗ್ಯ ಕೇಂದ್ರಗಳ ಮೌಲ್ಯಮಾಪಕ ಸಮಿತಿ) ಸಂಸ್ಥೆಯು ಎರಡು ವರ್ಷಗಳ ತನಕ ಅಂಗೀಕಾರ ನೀಡಿದೆ.

ರಾಮಕೃಷ್ಣ ಮಹಾಸಂಘದ ನಾಲ್ಕು ಕಾಲೇಜುಗಳಿಗೆ ೨೦೨೨ರಲ್ಲಿ ವಿಶೇಷ ಸ್ಥಾನ ಲಭಿಸಿದೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ NIRF (ನ್ಯಾಷನಲ್ ರ್‍ಯಾಂಕಿಂಗ್ ಫ್ರೇಂ ವರ್ಕ್) ವತಿಯಿಂದ ಇದನ್ನು ಘೋಷಿಸಲಾಗಿದೆ: ೧) **ಶಾರದಾ ಪೀಠ** ವಿದ್ಯಾಮಂದಿರ - ೯ನೇ ಸ್ಥಾನ, ೨) ವಿವೇಕಾನಂದ ಸೆಂಟಿನರಿ ಕಾಲೇಜು, **ರಹರಾ** - ೧೩ನೇ ಸ್ಥಾನ, ೩) ರೆಸಿಡೆನ್ಷಿಯಲ್ ಕಾಲೇಜು, **ನರೇಂದ್ರಪುರ** - ೧೯ನೇ ಸ್ಥಾನ, ೪) ಕೊಯಮತ್ತೂರು ಮಿಷನ್ ಕಲೆ ಮತ್ತು ವಿಜ್ಞಾನ ಕಾಲೇಜು - ೭೦ನೇ ಸ್ಥಾನ.



ರಥಯಾತ್ರೆಯ ಸಂದರ್ಭದಲ್ಲಿ **ಪುರಿ** ಮಠವು ಜುಲೈ ೧ರಿಂದ ೯ರ ವರೆಗೆ ವೈದ್ಯಕೀಯ ಶಿಬಿರವನ್ನು ನಡೆಸಿತು. ಇದರಲ್ಲಿ ೧೨೧೦ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ಇದಲ್ಲದೆ ೧೭,೪೦೦ ಯಾತ್ರಿಕರಿಗೆ ನಿಂಬೆ ಶರಬತ್ತು ವಿತರಿಸಿದೆ.

**ಲಕ್ನೋ** ಸೇವಾಶ್ರಮದಲ್ಲಿ ಸ್ವಾಮಿ ಗೌತಮಾನಂದಜಿಯರು ಆಮ್ಲಜನಿಕ ಘಟಕವನ್ನು ಉದ್ಘಾಟಿಸಿದರು.

### ಯುವ ಸಮ್ಮೇಳನ ಹಾಗೂ ಮೌಲ್ಯ ಶಿಕ್ಷಣ ಶಿಬಿರಗಳು

**ದೆಹಲಿ** ಕೇಂದ್ರವು ಜೂನ್ ೨೭ ರಿಂದ ಜುಲೈ ೨೩ರ ವರೆಗೆ ೯ ಆಫ್‌ಲೈನ್ ಹಾಗೂ ೪ ಆನ್‌ಲೈನ್ ಮೌಲ್ಯ ಶಿಕ್ಷಣ ಶಿಬಿರಗಳನ್ನು ನಡೆಸಿತು. ಭಾರತದ ವಿವಿಧ ಪ್ರದೇಶಗಳು ನಡೆದ ಈ ಶಿಬಿರಗಳಲ್ಲಿ ೭೪೬ ಮಂದಿ ಶಾಲೆಯ ಪ್ರಾಂಶುಪಲರುಗಳು ಭಾಗವಹಿಸಿದ್ದರು.

**ರಾಜಮಹೇಂದ್ರವರಂ** ಕೇಂದ್ರವು ಮೇ ೯ ರಿಂದ ಜೂನ್ ೫ರ ವರೆಗೆ ನಡೆಸಿದ ಬೇಸಿಗೆ ಶಿಬಿರದಲ್ಲಿ ೨೩೨ ಮಕ್ಕಳು ಪಾಲ್ಗೊಂಡಿದ್ದರು.

**ರಾಜ್‌ಕೋಟ್** ಆಶ್ರಮವು ಜೂನ್ ೨೫ರಂದು ಶಾಲಾ ಪ್ರಾಂಶುಪಾಲರುಗಳಿಗಾಗಿ ನಡೆಸಿದ ಸಮ್ಮೇಳನದಲ್ಲಿ ೩೦ ಪ್ರಾಂಶುಪಾಲರುಗಳು ಭಾಗವಹಿಸಿದ್ದರು.

**ತಂಜಾವೂರು** ಮಠವು ಜುಲೈ ೨ರಂದು ಕಾಂಚೀಪುರಂನಲ್ಲಿ ನಡೆಸಿದ ಅಧ್ಯಾಪಕ ತರಬೇತಿ ಕಾರ್ಯಕ್ರಮದಲ್ಲಿ ೧೫೦ ಶಿಕ್ಷಕರು ಭಾಗವಹಿಸಿದ್ದರು.

### ವೈದ್ಯಕೀಯ ಹಾಗೂ ನೇತ್ರ ಚಿಕಿತ್ಸಾ ಶಿಬಿರಗಳು

ಈ ಕೆಳಗಿನ ಕೇಂದ್ರಗಳಲ್ಲಿ ವೈದ್ಯಕೀಯ ಹಾಗೂ ನೇತ್ರ ಶಿಬಿರಗಳು ನಡೆದಿವೆ. ಆಲೋ, ಕೊಯಮತ್ತೂರು ಮಿಷನ್, ಕೂಚ್ ಬಿಹಾರ್, ದೆಹಲಿ, ಗೌರ್‌ಹಾಟಿ, ಗುರಪ್, ಕಾಮಾರಪುಕುರ, ಕಾಂಚೀಪುರಂ, ಲಕ್ನೋ, ಮದುರೈ, ಮಾನಸದ್ವೀಪ, ಮೇಖಲಿಗಂಜ್, ನೌರಾ, ರಾಹಾರಾ, ರಾಂಚಿ ಮೊರಬಾದಿ, ತಂಜಾವೂರು.

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020